<u>ದಿಃ **20.10.2022** ರಂದು ಮಾಡಿದ ಆದೇಶದ ಮೇರೆಗೆ ಸಾಕ್ಷಿಯ ವಿಚಾರಣೆ</u>

ದಿಃ**11.01.2023** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

<u>**ಪಾಟೀ ಸವಾಲುಃ 1, 3 ರಿಂದ 6 ನೇ ಆರೋಪಿತರ ಪರ ಶ್ರೀ ಎಸ್ ಬಿ ವಕೀಲರಿಂದಃ**</u>

11. ಮಂಜುನಾಥ ಈತನಿಗೆ ಹಲ್ಲೆ ಆಗುವುದನ್ನು ನಾನು ನೋಡಿಲ್ಲ. ಆತನಿಗೆ ಹಲ್ಲೆ ಮಾಡಿರುವ ವಿಚಾರವನ್ನು ನನ್ನ ಮಗ ವಿಜಯಕಾಂತ ನನಗೆ ಹೇಳಿದ ಮೇರೆಗೆ ಗೊತ್ತಾಗಿದೆ. ದಿಃ28.02.2012 ಕ್ಕಿಂತ 15 ದಿವಸ ಮುಂಚೆ ನನ್ನ ಮಗ ಮಂಜುನಾಥನಿಗೂ ಮತ್ತು 1 ನೇ ಆರೋಪಿಗೂ ಗಲಾಟೆಯಾಗಿತ್ತು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯವನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ರಸ್ತೆಯಲ್ಲಿ ನನ್ನ ಮಗ ಮಂಜುನಾಥನನ್ನು ಕರೆದುಕೊಂಡು ಹೋಗುತ್ತಿದ್ದಾಗ ಆರೋಪಿಗಳೆಲ್ಲಾ ನನಗೆ ಕೈಯಲ್ಲಿ, ಕಾಲಿನಲ್ಲಿ ಹೊಡೆದುಕೊಂಡು ಬರುತ್ತಿದ್ದರು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯವನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಕು ತೆಗೆದು ನನ್ನ ಬಲಭುಜದ ಕೆಳಗೆ ತಿವಿದನು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯವನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಚಿಕ್ಕಮಗ ವಿಜಯಕಾಂತನಿಗೆ ಪೋಲಿಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟು ಬಾ ಎಂದು ಹೇಳಿದೆನು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯವನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ.

12. ದಿಃ28.02.2012 ಮತ್ತು ದಿಃ29.02.2012 ರ ಮಧ್ಯರಾತ್ರಿ 1 ಘಂಟೆಯಿಂದ ಬೆಳಗಿನ ಜಾವ 6 ಘಂಟೆಯ ಅವಧಿಯಲ್ಲಿ ಪೋಲಿಸರು ನನ್ನನ್ನು ವಿಚಾರಿಸಿದಾಗ ನಾನು ಏನನ್ನೂ ನೋಡಿಲ್ಲ ಎಂದು ಅವರಿಗೆ ಹೇಳಿದ್ದೇನೆ ಎಂದರೆ ಸಾಕ್ಷಿದಾರರು ರಾತ್ರಿ 11.30 ಕ್ಕೆಲ್ಲಾ ಲೈವ್ 100 ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋದರು, ನನಗೆ ಅಲ್ಲಿ ಚಿಕಿತ್ಸೆ ಕೊಡುತ್ತಿದ್ದರು, ಪೋಲಿಸರು ಇದ್ದರು ಎನ್ನುತ್ತಾರೆ. ಲೈವ್ 100 ಆಸ್ಪತ್ರೆಯಿಂದ ದಿಃ29.02.2012 ರ ಮಧ್ಯಾಹ್ನ 12 ಘಂಟೆ ಸಮಯಕ್ಕೆ ಡಿಸ್ಚಾರ್ಜ್ ಆಗಿದ್ದೇನೆ. ಲೈವ್ 100 ಆಸ್ಪತ್ರೆಯಲ್ಲಿ ಇದ್ದಾಗ ಪೋಲಿಸರು ನನ್ನನ್ನು ವಿಚಾರಿಸಿದ್ದಾರೆ. ಪೋಲಿಸರು ಸುಮಾರು ಬೆಳಗ್ಗೆ 11 ಘಂಟೆಗೆ ಆ ರೀತಿ ನನ್ನನ್ನು ವಿಚಾರಿಸಿರಬಹುದು. ಲೈವ್ 100 ಆಸ್ಪತ್ರೆಗೆ ಪೋಲಿಸರು ಬಂದಿಲ್ಲ ಮತ್ತು ನನ್ನನ್ನು ವಿಚಾರಿಸಿಲ್ಲ

ಎಂದರೆ ಸರಿಯಲ್ಲ. ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋದ ಪೋಲಿಸರಿಗೆ ಪ್ರದೀಪ ಮತ್ತು 5-6 ಜನ ಬಂದು ನನಗೆ ಮತ್ತು ನನ್ನ ಮಗ ಮಂಜುನಾಥನಿಗೆ ಹಲ್ಲೆ ಮಾಡಿದ್ದಾರೆಂದು ನಾನು ಅವರಿಗೆ ಹೇಳಿದ್ದೇನೆ ಎಂದರೆ ಸರಿಯಲ್ಲ.

13. ಲೈವ್ ಹಂಡ್ರೆಡ್ ಆಸ್ಪತ್ರೆಗೆ ಹೋಗುವ ಮೊದಲು ವೆಂಕಟೇಶ್ವರ ಆಸ್ಪತ್ರೆಗೆ ಹೋಗಿದ್ದೆ. ವೆಂಕಟೇಶ್ವರ ಆಸ್ಪತ್ರೆಯಲ್ಲಿ ಪೋಲಿಸರು ನನ್ನನ್ನು ವಿಚಾರಿಸಿಲ್ಲ ಎಂದರೆ ಸರಿಯಲ್ಲ. ವೆಂಕಟೇಶ್ವರ ಆಸ್ಪತ್ರೆಯಲ್ಲಿ ನಾನು ಮಲಗಿದ್ದ ಬೆಡ್ ಹತ್ತಿರ ಬಂದು ಇನ್ಸ್ ಪೆಕ್ಟರ್ ರವರು ನನ್ನನ್ನು ವಿಚಾರಿಸಿದ್ದಾರೆ. ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಆಗ ಅವರು ವಿಚಾರಿಸಿದ್ದಾರೆ. ಅವರು ಬರವಣಿಗೆ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಇನ್ಸ್ ಪೆಕ್ಟರ್ ನನ್ನನ್ನು ವಿಚಾರಿಸುವಾಗ ವೈದ್ಯರು ಇದ್ದರು. ನನ್ನನ್ನು ಮತ್ತು ನನ್ನ ಹೆಂಡತಿಯನ್ನು ತಲಾ ಸುಮಾರು ಹತ್ತು ನಿಮಿಷ ವಿಚಾರಿಸಿದ್ದಾರೆ. ಇನ್ಸ್ ಪೆಕ್ಟರ್ ಜೊತೆ ವೈದ್ಯರು ಸಹ ಬಂದರು. ಇನ್ಸ್ ಪೆಕ್ಟರ್ ಜೊತೆ ಬರುವ ಮೊದಲು ವೈದ್ಯರಿಗೆ ಗಾಯ ಹೇಗೆ ಆಗಿದೆ ಎಂದು ಹೇಳಿದ್ದೆ. ವೈದ್ಯರಿಗೆ ಹೇಳಿದ ಮೇಲೆ ಎಷ್ಟು ಸಮಯದ ನಂತರ ಇನ್ಸ್ ಪೆಕ್ಟರ್ ರವರು ವಿಚಾರ ಮಾಡಿದ್ದಾರೆ ಎಂದು ಹೇಳಲು ಆಗುವುದಿಲ್ಲ. ವೈದ್ಯರ ಹತ್ತಿರ ಸಹ ನಾನು ಪ್ರದೀಪ್ ಮತ್ತು ಅವರ ಕಡೆಯ 5-6 ಜನ ಹಲ್ಲೆ ಮಾಡಿದ್ದಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಮಂಜುನಾಥನ ಶವವನ್ನು ನೋಡಿದಾಗ ಸಮಯ ಘಟನೆಯ ಮರುದಿನ ಮಧ್ಯಾಹ್ನ 1 ಘಂಟೆಯ ಮೇಲೆ ಆಗಿತ್ತು.

**<u>ಪಾಟೀ ಸವಾಲುಃ</u>** 2 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

ಮರುವಿಚಾರಣೆಃಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು